# ಮಹಿಳೆಯರಿಂದ ಮೈಗ್ರೇನ್!

ಜಗತ್ತಿನಲ್ಲಿ ಮಹಿಳೆಯರಲ್ಲಿಯೇ ಅರೆ ತಲೆನೋವು (ಮೈಗ್ರೇನ್) ಹೆಚ್ಚು. ಹೀಗೇಕೆ ಎಂಬ ಸಮಸ್ಯೆಯನ್ನು ಇಟ್ಟುಕೊಂಡು ಅಧ್ಯಯನ ನಡೆಸಿದ ಆಸ್ಟ್ರೇಲಿಯಾದ ಸಂಶೋಧಕರು ಅದಕ್ಕೆ ಅನುವಂಶೀಯ ಕಾರಣವನ್ನು ಗುರುತಿಸಿದ್ದು, ಮಹಿಳೆಯರಿಂದಲೇ ಇದು ಅನುವಂಶೀಯವಾಗಿ ಬರುತ್ತದೆ ಎಂಬುದನ್ನು ಪತ್ತೆ ಹಚ್ಚಿದ್ದಾರೆ.

ಸ್ತ್ರೀಯರಲ್ಲಿ ಎರಡೂ ವರ್ಣತಂತು (ಕ್ರೋಮೋಸೋಮುಗಳು) x ಇರುತ್ತವೆ. ಆದರೆ ಪುರುಷರಲ್ಲಿ x y ಎಂಬ ಭಿನ್ನ ವರ್ಣತಂತುಗಳು ಇರುತ್ತವೆ. ಸಾಮಾನ್ಯವಾಗಿ ಮೈಗ್ರೇನ್‌ಗೆ ಕಾರಣವಾಗುವ ಅಂಶ x ವರ್ಣತಂತುವಿನಲ್ಲಿ ಇರುತ್ತದೆ. ಈ ಕಾರಣಕ್ಕಾಗಿಯೇ ಇದು ಅನುವಂಶೀಯ ಕಾಯಿಲೆ. ಆದ್ದರಿಂದ ಸ್ತ್ರೀಯರಿಂದ ಮೈಗ್ರೇನ್ ಹರಡುತ್ತದೆ ಎನ್ನುವುದು ಅವರ ಅಧ್ಯಯನದ ಸಾರ.

ಸರಿಸುಮಾರು ಶೇ.12ರಷ್ಟು ಮಂದಿ ಮೈಗ್ರೇನ್‌ನಿಂದ ಬಳಲುತ್ತಿದ್ದಾರೆ. ಇದರ ನಿಯಂತ್ರಣಕ್ಕೆ ಅಗತ್ಯ ಔಷಧವನ್ನು ಕಂಡುಹಿಡಿದರೆ ಅನುವಂಶೀಯ ಗುಣವನ್ನೂ ಹತೋಟಿಗೆ ತರಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

## ಅಳಿಯದೇ ಉಳಿಯುವ ನೋವು!

ಕೆಲವರಿಗೆ ಮಾತ್ರ ತೀವ್ರ ನೋವಿನ ಯಾತನೆಯಾಗುತ್ತದೆ ಗೊತ್ತೆ? ಸಮಪ್ರಮಾಣದ ಪೆಟ್ಟು ಹಲವರಿಗೆ ಏಕಕಾಲದಲ್ಲಿ ಬಿದ್ದಾಗ ಅದರಲ್ಲಿ ಕೆಲವರಷ್ಟೇ ತೀವ್ರ ನೋವಿನ ಯಾತನೆಯನ್ನು ವ್ಯಕ್ತಪಡಿಸುತ್ತಾರೆ. ಕಾರಣ ಏನೆಂದರೆ ಅವರ ಮೆದುಳಿನ ನರಮಂಡಲದಲ್ಲಿ ನೋವಿಗೆ ತೀವ್ರವಾಗಿ ಸ್ಪಂದಿಸುವ ಜೀವ ತಂತುಗಳು ಇರುತ್ತವೆ. ಆದ್ದರಿಂದ ಅವರು ಬಹುಬೇಗ ನೋವನ್ನು ಪ್ರಕಟಿಸುತ್ತಾರೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ದೇಹದ ಸಣ್ಣ– ಪುಟ್ಟ ನೋವಿಗೂ ತೀವ್ರವಾಗಿ ಮಿಡಿಯುವವರನ್ನು ಕಂಡು ನಾಟಕ ಎಂದು ಅಪಹಾಸ್ಯ ಮಾಡುವುದು ತಪ್ಪು ಎನ್ನುವುದು ಈ ಅಧ್ಯಯನದಿಂದ ತಿಳಿದಿದೆ. ಮನುಷ್ಯನ ಮೆದುಳಿನ ಭಾವನಾತ್ಮಕ ಸ್ಥಿತಿ ಕೂಡ ನೋವಿಗೆ ಸ್ಪಂದಿಸಲು ಪ್ರಮುಖ ಕಾರಣ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಅತಿ ಹೆಚ್ಚು ನೋವಿನ ಅನುಭವ ಆಗುವವರಿಗೆ ಮೊದಲೇನಾದರೂ ಪೆಟ್ಟು ಬಿದ್ದಿದ್ದರೆ ಅದು ಅವರ ಸ್ಮೃತಿಪಟಲದಲ್ಲಿ ಹಾಗೆ ಉಳಿದಿರುತ್ತದೆ. ಹಾಗಾಗಿ ಮೆದುಳು ಹೆಚ್ಚು ನೋವಿನ ಭಾವವನ್ನು ವ್ಯಕ್ತಪಡಿಸುತ್ತದೆ ಎಂದು ಸಂಶೋಧಕರು ಕಾರಣವನ್ನು ನೀಡಿದ್ದಾರೆ. ಬೆನ್ನು ನೋವಿನಿಂದ ಬಳಲುತ್ತಿದ್ದ 40 ಮಂದಿಯನ್ನು ಅಧ್ಯಯನಕ್ಕೆ ಒಳಪಡಿಸಿದ್ದರು.

## ಗಲಭೆಗಳಿಂದ ಖಿನ್ನರಾಗುವ ಮಕ್ಕಳು

ಕೋಮು, ಜಾತಿ ಗಲಭೆಗಳು ಎಳೆಯ ಮಕ್ಕಳ ಮನಸ್ಸಿನಲ್ಲಿ ದೀರ್ಘಕಾಲದವರೆಗೆ ಋಣಾತ್ಮಕ ಪರಿಣಾಮವನ್ನು ಬೀರುತ್ತದೆ ಎಂದು ನೂತನ ಅಧ್ಯಯನ ಹೇಳಿದೆ.

ಸಾಮೂಹಿಕ ಹಿಂಸಾಚಾರ ಹಾಗೂ ಗುಂಪು ದಾಳಿಗಳು ಮಕ್ಕಳ ಮನೋ ಆರೋಗ್ಯವನ್ನು ಹಾಳುಮಾಡುತ್ತವೆ. ಅವರಲ್ಲಿ ಖಿನ್ನತೆ ಹಾಗೂ ಮಾನಸಿಕ ಒತ್ತಡ ದೀರ್ಘ ಕಾಲದವರೆಗೆ ಕಾಡಿದರೆ, ಓದಿನಲ್ಲಿ ನಿರುತ್ಸಾಹ ಏಕಾಗ್ರತೆ ಸಮಸ್ಯೆ ಸ್ವಲ್ಪ ದಿನಗಳಾದರೂ ಅವರನ್ನು ಬಾಧಿಸುತ್ತದೆ ಎನ್ನುವುದು ಸಂಶೋಧಕರ ವಾದ.

8ರಿಂದ 13 ವರ್ಷದೊಳಗಿನ 124 ಮಕ್ಕಳನ್ನು ಗ್ರಾಮ, ಪಟ್ಟಣ ಮೂಲದಿಂದ ಆಯ್ಕೆ ಮಾಡಿಕೊಂಡು ಅವರು ಅಧ್ಯಯನ ನಡೆಸಿದ್ದರು. ಗಲಭೆ ನಡೆಯದ ಪ್ರದೇಶದಲ್ಲಿ ಬೆಳೆದ ಮಕ್ಕಳ ಮಾನಸಿಕ ಸ್ಥಿತಿ ಸಮರ್ಪಕವಾಗಿತ್ತು. ಆದರೆ, ಗಲಭೆ ಪೀಡಿತ ಸ್ಥಳಗಳಲ್ಲಿ ಬೆಳೆದ ಮಕ್ಕಳ ಮನಸ್ಸು ಘಾಸಿಗೊಂಡಿತ್ತು ಎಂಬುದನ್ನು ಸಂಶೋಧಕರು ಗುರುತಿಸಿದ್ದಾರೆ.

–ಟಿಪ್ಸ್

## ಕಾರ್ಟೂನ್

